156ನೇ ೬ (82)

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ. ಎನ್. ಜವರಾಯಿಗೌಡ ಇವರು ನಿಯಮ 330ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ವಿಷಯ:**

ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕೆ.ಆರ್.ನಗರ ವಿಧಾನ ಸಭಾ ಕ್ಷೇತ್ರ ಒಳಗೊಂಡಂತೆ ಕೇಂದ್ರ ಸರ್ಕಾರದ ಅಮೃತ್-2.0 ಯೋಜನೆಯಡಿಯಲ್ಲಿ ಒಟ್ಟು ಎಷ್ಟು ಕಾಮಗಾರಿಗಳು ಪ್ರಗತಿಯಲ್ಲಿವೆ, ಕಾಮಗಾರಿಗಳ ವಿವರ, ಅಂದಾಜು ಮೊತ್ತ & ಕಾಮಗಾರಿಗಳಿಗೆ ಅನುಮೋದನೆ ನೀಡಿರುವ ದಿನಾಂಕದೊಂದಿಗೆ ಸಂಪೂರ್ಣ ವಿವರ ನೀಡುವುದು ಹಾಗೂ ಈ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿರುವ ದಿನಾಂಕ ಮತ್ತು ಟೆಂಡರ್ ಅಂತಿಮಗೊಂಡ ದಿನಾಂಕ ಟೆಂಡರ್ ನಲ್ಲಿ ಭಾಗವಹಿಸಿದವರ ವಿವರ ಹಾಗೂ ಟೆಂಡರ್ ಅಂತಿಮಗೊಂಡ ಗುತ್ತಿಗೆದಾರರು ಟೆಂಡರ್‌ಗೆ ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು ನೀಡುವುದು ಹಾಗೂ ಈ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಹಾಗೂ ಕೇಂದ್ರ ಸರ್ಕಾರವು ಶೇ.60& ರಷ್ಟು ಅನುದಾನವನ್ನು ನೀಡುತ್ತಿದ್ದು, ಸ್ಥಳೀಯ ಲೋಕಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರ ಗಮನಕ್ಕೆ ತರದೇ ಹಾಗೂ ಶಿಷ್ಟಾಚಾರವನ್ನು ಪಾಲನೆ ಮಾಡದೆ ಕಾಮಗಾರಿಗಳನ್ನು ಕೈಗೊಳ್ಳುತ್ತಿರಲು ಕಾರಣಗಳೇನು ಹಾಗೂ ಶಿಷ್ಟಾಚಾರವನ್ನು ಪಾಲನೆ ಮಾಡಿದ್ದಲ್ಲಿ ಜಿಲ್ಲಾಧಿಕಾರಿಗಳಿಂದ ಶಿಷ್ಟಾಚಾರದಂತೆ ಅನುಮೋದನೆ ಪಡೆದ ಎಲ್ಲಾ ದಾಖಲೆಗಳನ್ನು ನೀಡುವುದು ಹಾಗೂ ಈ ಕಾಮಗಾರಿಗಳ ಪ್ರಗತಿಯ ಅನುಸಾರ ಇಲ್ಲಿಯವರೆಗೆ ಪಾವತಿಸಲಾದ ಬಿಲ್ಲುಗಳ ವಿವರ ನೀಡುವಂತೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆದಿರುವ ಬಗ್ಗೆ.

**ಉತ್ತರ:**

ಕೇಂದ್ರ ಸರ್ಕಾರದ ಅಮೃತ್ 2.0 ಯೋಜನೆಯಡಿ 209 ಸ್ಥಳೀಯ ಸಂಸ್ಥೆಗಳಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಕಾಮಗಾರಿಯ ವಿವರ, ಅಂದಾಜು ಮೊತ್ತ ಹಾಗೂ ಕಾಮಗಾರಿಗಳಿಗೆ ಅನುಮೋದನೆ ನೀಡಿರುವ ದಿನಾಂಕಗಳ ವಿವರ, ಟೆಂಡರ್ ಕರೆಯಲಾದ ದಿನಾಂಕ ಹಾಗೂ ಅಂತಿಮಗೊಂಡ ದಿನಾಂಕ, ಭಾಗವಹಿಸಿರುವ ಗುತ್ತಿಗೆದಾರರು, ಅಂತಿಮಗೊಂಡ ಗುತ್ತಿಗೆದಾರರುಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ. ಟೆಂಡರ್‌ಗೆ ಸಲ್ಲಿಸಿರುವ ದಾಖಲೆಗಳ ಪ್ರತಿ ಹಾಗೂ ಶಿಷ್ಟಾಚಾರ ಪಾಲನೆ ಸಂಬಂಧ ದಾಖಲೆಗಳ ಪ್ರತಿಗಳನ್ನು ಹಾರ್ಡ್‌ಡಿಸ್ಕನಲ್ಲಿ ನೀಡಿದೆ. ಕಾಮಗಾರಿಯ ಪ್ರಗತಿಯ ಅನುಸಾರ ಪಾವತಿಸಲಾದ ಬಿಲ್ಲುಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಿದೆ.

ಸಂಖ್ಯೆ: ನಅಇ 226 ಸಿಎಸ್‌ಎಸ್ 2025

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು